ಸಂಜೆ ದರ್ಪಣ
ವಾಣಿಜ್ಯ ರಾಜಧಾನಿಯ ಜನಮನದ ಧ್ವನಿ
Sanje Darpana Evening Daily

# ಸಂಘಟಿತ ಹೋರಾಟವೊಂದೇ ಪರಿಹಾರ



**ನರಗುಂದ:** ನಮ್ಮದೊಂದು ಕುಟುಂಬವಿದ್ದಂತೆ ನನ್ನ ಹಾಗೂ ಶಿಕ್ಷಕರ ನಡುವಿನ ಸಂಬಂಧವು ಇಡೀ ರಾಜ್ಯಕ್ಕೆ ಮಾದರಿಯಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಪಟ್ಟಣದ ಬಸವೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಶಿಕ್ಷಕರ ಸಮಸ್ಯೆ ಗಳ ಕುರಿತು ಏರ್ಪಡಿಸಿದ ಸಂಹಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು, ಕಾಲ್ಪನಿಕ ವೇತನ ಅನುದಾನರಹಿತ ಶಾಲೆಗಳಿಗೆ ಅನುದಾನ ನೀಡುವ 2006ರ ನಂತರ ಅನುದಾನಕ್ಕೆ ಒಳಪಟ್ಟ ಶಿಕ್ಷಕರಿಗೆ ಪಿಂಚಣಿ ನೀಡುವ ಹಲವಾರು ಜ್ವಲಂತ ಸಮಸ್ಯೆಗಳು ನಮ್ಮ ಮುಂದಿವೆ. ಆದರೆ ಇದುವರೆಗೆ ಅಧಿಕಾರಕ್ಕೆ ಬಂದ ಸರಕಾರಗಳು ದಿನಕ್ಕೊಂದು ಅವೈಜ್ಞಾನಿಕ ಆದೇಶಗಳನ್ನು ಹೊರಡಿಸುತ್ತಾ ಶಿಕ್ಷಣ ಸಂಸ್ಥೆಗಳನ್ನು ಹಂತ ಹಂತವಾಗಿ ಮುಚ್ಚುವ ಹುನ್ನಾರ ನಡೆಸಿವೆ. ಇದಕ್ಕೆ ಸಂಘಟಿತ ಹೋರಾಟ ವೊಂದೇ ಪರಿಹಾರವಾಗಿದ್ದು ನೀವು ಸಂಘಟಿತರಾಗದಿದ್ದರೆ, ಮುಂದಿನ ದಿನಮಾನಗಳು ಕಷ್ಟಕರವಾಗಲಿವೆ ಎಂದು ಶಿಕ್ಷಕರಿಗೆ ಎಚ್ಚರಿಸಿದರು.

ಮಾಧ್ಯಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷ ಝಡ್ ಎಮ್ ಖಾಜಿ ಶಿಕ್ಷಕರ ಜ್ವಲಂತ ಸಮಸ್ಯೆಗಳ ಕುರಿತು ಮಾನ್ಯ ಸಭಾಪತಿಗಳ ಗಮನಕ್ಕೆ ತಂದರು.

ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ಗೌರವಾಧ್ಯಕ್ಷ ಬಸವರಾಜ ಧಾರವಾಡ ಮಾತನಾಡಿ, ಶಿಕ್ಷಕರಿಗೆ ಹೊರಟ್ಟಿ ಸಂಜೀವಿನಿ ಇದ್ದ ಹಾಗೆ ಶಿಕ್ಷಕರ ಸಮಸ್ಯೆಗಳ ಪರಿಹಾರಕ್ಕಾಗಿ ಇಂತಹ ಇಳಿವಯಸ್ಸಿನಲ್ಲೂ ಸಹ ಹಗಲಿರುಳು ಶ್ರಮಿಸುತ್ತಿರುವ ಹೊರಟ್ಟಿ ಸರ್ ಅವರನ್ನು ಈ ಭಾರಿ ಅವಿರೋಧವಾಗಿ ಆಯ್ಕೆ ಮಾಡುವ ಚಿಂತನೆ ನಡೆದಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ಬಸವೇಶ್ವರ ವಿದ್ಯಾಸಂಸ್ಥೆಯ ಚೇರಮನ್ ಚನ್ನಬಸಪ್ಪ ಕಂಠಿ, ಬಿ.ಆರ್.ಪಾಟೀಲ, ದೊಡ್ಡಲಿಂಗಪ್ಪನವರ ಹಾಗೂ ಸಾಲಿಮಠ, ಮಾತನಾಡಿದರು.

ಗದಗ ಜಿಲ್ಲಾ ಮಾಧ್ಯಮಿಕ ಶಾಲಾ ನೌಕರರ ಸಂಘದ ಅಧ್ಯಕ್ಷ ಎಮ್ ಎಸ್ ಅಂಗಡಿ, ಪ್ರಾಚಾರ್ಯ ಎಂ.ಡಿ.ಕಮತಗಿ, ಬ್ಲಾಕ್ ಶಿಕ್ಷಣಾಧಿಕಾರಿ ರಾಜೇಶ್ವರಿ ಕುಡಚಿ, ಕೆ.ಬಿ.ಅರಕೇರಿ, ಪಿ.ವಿ.ಕೆಂಚನಗೌಡ್ರ, ಟಿ.ಆರ್.ಸತ್ಯರಡ್ಡಿ, ಮಹಿಳಾ ಪ್ರತಿನಿಧಿ ಸುಮನ್ ಅನ್ವೇಕರ, ಸೇರಿದಂತೆ ತಾಲೂಕಿನ ಸರಕಾರಿ ಅನುದಾನಿತ, ಅನುದಾನರಹಿತ ಸರಕಾರಿ ಶಾಲಾಕಾಲೇಜುಗಳು ಶಿಕ್ಷಕರು ಭಾಗವಹಿಸಿದ್ದರು.

ಸಂಜೆ ದರ್ಪಣ
ವಾಣಿಜ್ಯ ರಾಜಧಾನಿಯ ಜನಮನದ ಧ್ವನಿ
Sanje Darpana Evening Daily

# ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ವಿತರಣೆ

ಹುಬ್ಬಳ್ಳಿ: ಹಿರಿಯ ನಾಗರಿಕರ ಸಬಲೀಕರಣಕ್ಕೆ ಜಿಲ್ಲೆಯಲ್ಲಿ 74 ಸಾವಿರ ಹಿರಿಯ ನಾಗರಿಕರಿಗೆ ಗುರುತಿನ ಚೀಟಿಯನ್ನು ವಿತರಿಸಲಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ ಹೇಳಿದರು.



ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಆನಂದನಗರ ಮೇದಾರ ಪ್ಲಾಟ್‌ನ ಅಂಧ ಬಾಲಕರ ಸರ್ಕಾರಿ ಪಾಠಶಾಲೆಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ನವೀಕರಣ ಇಲಾಖೆ, ಸ್ವಯಂ ಸೇವಾ ಸಂಸ್ಥೆ, ರಾಜ್ಯ ನಿವೃತ್ತ ಸರ್ಕಾರಿ ನೌಕರರ ಸಂಘ, ಹಿರಿಯ ನಾಗರಿಕ ಕ್ಷೇಮಾಭಿವೃದ್ಧಿ ಸಂಘ ಹುಬ್ಬಳ್ಳಿ ಇವರುಗಳ ಆಶ್ರಯದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯರು ಯಾವುದೇ ಆಧುನಿಕ ಪರಂಪರೆಗೆ ಜಿಗುಪ್ಸೆಗೆ ಒಳಗಾಗದೆ ಸದೃಢರಾಗಿ ಬಾಳಿ ಬದುಕಬೇಕು. ಮಕ್ಕಳು ಹಾಗೂ ತಂದೆ-ತಾಯಿಯ ಬಾಂಧವ್ಯ ಅತ್ಯಮೂಲ್ಯವಾದದ್ದು, 3 ವರ್ಷಗಳ ಹಿಂದೆ ಸುಪ್ರೀಂಕೋರ್ಟ್ ಆದೇಶದನ್ವಯ ತಂದೆ-ತಾಯಿಗಳ ಸಂರಕ್ಷಣೆ ಅಗತ್ಯವೆಂದು, ಆದೇಶದಂತೆ ಹಿರಿಯ ನಾಗರಿಕರು ಗಟ್ಟಿಯಾಗಬೇಕು. ನವಯುವಕ ಯುವತಿಯರು ತಂದೆ-ತಾಯಿಗಳ ನೋವನ್ನು ಅರಿತು ಬಾಳಬೇಕು. ದೇಶದ ಐಕ್ಯತೆಗೆ ಭಾವನೆಯನ್ನು ಅಳವಡಿಸಬೇಕು ಎಂದರು. ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಡಿ. ಎಸ್ ಮೂಲಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರಿಯ ನಾಗರಿಕ ಸಾಧಕರಾದ ದ್ಯಾಮನಗೌಡ ಪಾಟೀಲರನ್ನು ಸನ್ಮಾನಿಸಲಾಯಿತು. ಜಿಲ್ಲಾ ಮಟ್ಟದ ಹಿರಿಯ ನಾಗರಿಕ ಸಮಿತಿ ಸದಸ್ಯ ಐ.ಕೆ ಲಕ್ಕುಂಡಿ ಸೇರಿದಂತೆ ಎ.ಬಿ ಕೋಲ್, ನಿವೃತ್ತ ವಕೀಲ ವಿ.ಬಿ. ಮಟ್ಟೂರು, ನಿವೃತ್ತ ಕಿಮ್ಸ್ ವೈದ್ಯ ಡಾ. ಗೋಕಲ ಸೇರಿದಂತೆ ಇತರರಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಡಾ. ಹೆಚ್.ಹೆಚ್ ಕುಕನೂರ ಸ್ವಾಗತಿಸಿದರು. ಅಂಧ ಬಾಲಕರ ಸರ್ಕಾರಿ ಶಾಲೆಯ ಅಧೀಕ್ಷಕ ಅಣ್ಣಪ್ಪ ವಂದಿಸಿದರು. ಪ್ರಾರಂಭದಲ್ಲಿ ವಿಧ್ಯಾರ್ಥಿಗಳು ಪ್ರಾರ್ಥನೆ ಹಾಡಿದರು.